# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮದ ನೋಂದಾಯಿತ ಕಚೇರಿ: ನಂ: 29,
ವಿಜಯನಗರ 2 ನೇ ಹಂತ,
ಕಾವೇರಿ ಗ್ರಾಮಿಣ ಬ್ಯಾಂಕ್ ರಸ್ತೆ, ಹಿನಕಲ್,
ಮೈಸೂರು-570017
ನಿಗಮ ವೆಬ್ ಸೈಟ್:www.cescmysore.org.
ಇಮೇಲ್: gmcescmysore@gmail.com
CIN No.U40109KA2004SGC035177

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ರವರ ಕಚೇರಿ ಚಾವಿಸನಿನಿ, ಕಾ&ಪಾ ಗ್ರಾಮಾಂತರ ಉಪ ವಿಭಾಗ
ಮದ್ದೂರು-571428
ದೂರವಾಣಿ: 08232-236255,
ಮೊಬೈಲ್: 9448994850
ಫ್ಯಾಕ್ಸ್: 08232-233600
ಇ-ಮೇಲ್: aeemdr2@rediffmail.com


ಕ್ರಮಾಂಕ: ಸ.ಕಾ.ನಿ.ಇಂ(ವಿ)/ಸಇಂ(ತಾಂ)/ಗ್ರಾ.ಉ.ವಿ/ಮದ್ದೂರು/2018-19/2473-80 ದಿನಾಂಕ: 28/12/2018

## ಜನಸಂಪರ್ಕ ಸಭಾ ನಡಾವಳಿ

ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ವೃತ್ತ ಕಛೇರಿ, ಮಂಡ್ಯ ರವರ ಅಧ್ಯಕ್ಷತೆಯಲ್ಲಿ ವಿಭಾಗೀಯ ಕಛೇರಿ ಮದ್ದೂರಿನಲ್ಲಿ ದಿನಾಂಕ: 18.12.2018 ರಂದು ಮಧ್ಯಾಹ್ನ 2.30 ಗಂಟೆಗೆ ಜರುಗಿದ ಗ್ರಾಮಾಂತರ ಉಪವಿಭಾಗದ ಜನಸಂಪರ್ಕ ಸಭೆಯ ನಡಾವಳಿ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರ ವಿವರ:

| ಕ್ರಮ ಸಂಖ್ಯೆ | ಅಧಿಕಾರಿ/ಸಿಬ್ಬಂದಿ | ಹುದ್ದೆ | ಕಾರ್ಯನಿರ್ವಹಿಸುತ್ತಿರುವ ಸ್ಥಳ |
|---|---|---|---|
| 1 | ಶ್ರೀ ಶ್ರೀನಿವಾಸಮೂರ್ತಿ | ಅಇಂ(ವಿ) | ವೃತ್ತ ಕಛೇರಿ, ಮಂಡ್ಯ |
| 2 | ಶ್ರೀ ರವಿಶಂಕರ್ | ಕಾಇಂ(ವಿ) | ಮದ್ದೂರು ವಿಭಾಗ, ಮದ್ದೂರು |
| 3 | ಶ್ರೀ ಸುಭಾಷ್ | ಸಕಾಇಂ(ವಿ) | ವಿಭಾಗೀಯ ಕಛೇರಿ, ಮದ್ದೂರು |
| 4 | ಶ್ರೀ ರಾಜೇಂದ್ರ | ಸಕಾಇಂ(ವಿ) | ಮದ್ದೂರು ಉಪವಿಭಾಗ-1 |
| 5 | ಶ್ರೀ ನಾಗರಾಜು | ಲೆಕ್ಕಾಧಿಕಾರಿಗಳು | ವಿಭಾಗೀಯ ಕಛೇರಿ, ಮದ್ದೂರು |
| 6 | ಶ್ರೀ ಮೋಹನ್‌ರಾಜ್ | ಸಇಂ(ತಾಂತ್ರಿಕ) | ಮದ್ದೂರು ಗ್ರಾಮಾಂತರ ಉಪವಿಭಾಗ |
| 7 | ಶ್ರೀ ತೇಜ್ ಪ್ರಕಾಶ್ | ಕಿಇಂ(ವಿ) | ಕೆ.ಹೊನ್ನಲಗೆರೆ ಶಾಖೆ |
| 8 | ಶ್ರೀ ಸಂತೋಷ್ | ಕಿಇಂ(ವಿ) | ಬೆಸಗರಹಳ್ಳಿ ಶಾಖೆ |
| 9 | ಶ್ರೀ ಶಿವರಾಜು | ಪ್ರಕಿಇಂ(ವಿ) | ಕೌಡ್ಲೆ ಶಾಖೆ |

ಸಭೆಯಲ್ಲಿ ಹಾಜರಿದ್ದ ಎಲ್ಲಾ ಗ್ರಾಹಕರು/ನೌಕರರುಗಳನ್ನು ಅಧೀಕ್ಷಕ ಇಂಜಿನಿಯರ್(ವಿ), ಮಂಡ್ಯ ರವರು, ಸ್ವಾಗತಿಸಿ ಈ ಕೆಳಕಂಡ ಗ್ರಾಹಕರ ದೂರುಗಳಿಗೆ ಪ್ರತಿಕ್ರಿಯಿಸಿ ಉತ್ತರಿಸಿದರು.

| ಕ್ರಮ ಸಂಖ್ಯೆ | ಗ್ರಾಹಕರ ದೂರುಗಳು | ಕೈಗೊಂಡ ಕ್ರಮಗಳು |
|---|---|---|
| | **ಗ್ರಾಹಕರು –ಶ್ರೀ ಅಪ್ಪಾಜಿಗೌಡ, ರಾಜೇಗೌಡನದೊಡ್ಡಿ ಗ್ರಾಮ 9739253987** | |
| 1 | ನಾವು ಕಟ್ಟಿರುವ ಹೊಸ ಮನೆಗೆ ವಿದ್ಯುತ್ ಸಂಪರ್ಕ ಕೊಡಲು ಶಾಖಾಧಿಕಾರಿ ಕೆ.ಹೊನ್ನಲಗೆರೆ ರವರು ನಿರಾಕರಿಸುತ್ತಿದ್ದಾರೆ ಎಂದು ತಿಳಿಸಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಸಂಬಂಧಪಟ್ಟ ಶಾಖಾಧಿಕಾರಿ ಕೆ.ಹೊನ್ನಲಗೆರೆ ರವರನ್ನು ಕೇಳಲಾಗಿ ಗ್ರಾಹಕರ ಹಳೇ ಮನೆಯ ಕಂದಾಯ ಬಾಕಿ ಉಳಿದಿರುವುದರಿಂದ ಹೊಸ ಮನೆಗೆ ವಿದ್ಯುತ್ ಸಂಪರ್ಕ ಕೊಡಲಾಗುವುದಿಲ್ಲ ಎಂದು ತಿಳಿಸಿದರು. ಮುಂದುವರೆದು ಅಧೀಕ್ಷಕ ಇಂಜಿನಿಯರ್(ವಿ), ಮಂಡ್ಯರವರು ಮಾತನಾಡಿ ನಿಗಮದ ನಿಯಮಾನುಸಾರ ಹೊಸ ಸಂಪರ್ಕ ಕಲ್ಪಿಸಲು ಇರುವ ನಿಯಮಾವಳಿಗಳನ್ನು ಗ್ರಾಹಕರಿಗೆ ಲಿಖಿತವಾಗಿ ತಿಳಿಸಲು ತಿಳಿಸಿದರು. |
| | **ಗ್ರಾಹಕರು– ಚಂದ್ರಶೇಖರ್, ಬಿಕ್ಕೆಳಲೆ ಗ್ರಾಮ 9741462363** | |
| 2 | ಸದರಿ ಗ್ರಾಹಕರು ನಮ್ಮ ತೋಟದ ಮನೆಗೆ ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಿ ಎಂದು ಕೋರಿದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ತೋಟದ ಮನೆಗಳಿಗೆ ಸ್ವಯಂ ನಿರ್ವಹಣ ಯೋಜನೆಯಡಿ ಗ್ರಾಹಕರೇ ವಿದ್ಯುತ್ ಸಂಪರ್ಕ ಕಲ್ಪಿಸಿಕೊಳ್ಳಬೇಕು. ನಿಗಮದ ವತಿಯಿಂದ ವಿದ್ಯುತ್ ಸಂಪರ್ಕ ಕಲ್ಪಿಸಲು ಬರುವುದಿಲ್ಲ ಎಂದು ತಿಳಿಸಿದರು. |
| | **ಗ್ರಾಹಕರು– ಶ್ರೀ ಸ್ವಾಮಿ ಕೆ.ಹೊನ್ನಲಗೆರೆ ಗ್ರಾಮ** | |
| 3 | ಸದರಿ ಗ್ರಾಹಕರು ಗ್ರಾಮದ 100 ಕೆವಿಎ ಪರಿವರ್ತಕ ಪದೇ ಪದೇ ವಿಫಲಗೊಳ್ಳುತ್ತಿದೆ. ಹೆಚ್ಚುವರಿ ಪರಿವರ್ತಕ ಅಳವಡಿಸಿಕೊಡಿ ಎಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಸಂಬಂಧಪಟ್ಟ ಕಿರಿಯ ಇಂಜಿನಿಯರ್(ವಿ)ರವರನ್ನು ಕೇಳಲಾಗಿ ಹೆಚ್ಚುವರಿ ಪರಿವರ್ತಕ ಅಳವಡಿಸುವ ಅಂದಾಜು ಪಟ್ಟಿಯನ್ನು ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದೆ ಎಂದು ತಿಳಿಸಿದರು. |
| | **ಗ್ರಾಹಕರು– ಶ್ರೀ ಎನ್.ಜೆ.ಶಿವಣ್ಣ, ನೀಲಕಂಠನಹಳ್ಳಿ** | |
| 4 | ಗ್ರಾಹಕರು ಅಕ್ರಮ–ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು ಐಪಿ ಸ್ಥಾವರಕ್ಕೆ ಮೂಲಭೂತ ಸೌಕರ್ಯ ಒದಗಿಸಿಕೊಡಬೇಕೆಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಜೇಷ್ಠತಾ ಪಟ್ಟಿಯನುಸಾರ ಮುಂದಿನ ದಿನಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಿಕೊಡಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |
| | **ಗ್ರಾಹಕರು– ಶ್ರೀ ರಮಾನಂದ್, ತರೀಕೆರೆ ಕಾಲೋನಿ 9964501923** | |
| 5 | ನಮ್ಮ ಐಪಿ ಸೆಟ್‌ಗೆ ಮೂಲಭೂತ ಸೌಕರ್ಯ ಕಲ್ಪಿಸಲು ಸ್ವಯಂ ನಿರ್ವಹಣಾ ಯೋಜನೆಯಡಿ ಅಂದಾಜು ಪಟ್ಟಿ ಸಲ್ಲಿಸಲಾಗಿದೆ. ಇದುವರೆವಿಗೂ ಮಂಜೂರಾತಿ ದೊರಕಿಲ್ಲ ಎಂದು ತಿಳಿಸಿದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ವೃತ್ತ ರವರು ಮಾತನಾಡಿ ವಿಭಾಗೀಯ ಕಛೇರಿಯ ಸಹಾಯಕ ಇಂಜಿನಿಯರ್(ತಾಂತ್ರಿಕ) ಮಂಜುನಾಥ್‌ರವರಿಗೆ ತಿಳಿಸಿ ಸದರಿ ಅಂದಾಜು ಪಟ್ಟಿಗೆ ಜರೂರಾಗಿ ಮಂಜೂರಾತಿ ಕೊಡಲು ಸೂಚಿಸಿದರು. |

| | | |
|---|---|---|
| **ಗ್ರಾಹಕರು- ಶ್ರೀ ಮಲ್ಲರಾಜು, ಕೊತ್ತನಹಳ್ಳಿ 9141607733** | | |
| 6 | ನಮ್ಮ ಗ್ರಾಮದ 100 ಕೆವಿಎ ಪರಿವರ್ತಕ ಅಧಿಕ ಭಾರ & ಒತ್ತಡದಿಂದ ಪದೇ ಪದೇ ವಿಫಲಗೊಳ್ಳುತ್ತಿದೆ. ಹೆಚ್ಚುವರಿ ಪರಿವರ್ತಕ ಅಳವಡಿಸಿಕೊಡಿ ಎಂದು ಕೋರಿದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಸದರಿ ಗ್ರಾಮದ ಹೆಚ್ಚುವರಿ ಪರಿವರ್ತಕ ಅಳವಡಿಸುವ ಅಂದಾಜು ಪಟ್ಟಿಗೆ ಮಂಜೂರಾತಿ ದೊರಕಿದ್ದು, ಅವಾರ್ಡ್ ಕೂಡ ಆಗಿದೆ ಎಂದು ತಿಳಿಸಿ, ಸಂಬಂಧಪಟ್ಟ ಶಾಖಾಧಿಕಾರಿಗೆ 15 ದಿನದಲ್ಲಿ ಕೆಲಸ ಮಾಡಲು ಸೂಚಿಸಿದರು. |
| **ಗ್ರಾಹಕರು- ಶ್ರೀ ಶಿವಕುಮಾರ್, ಹುನುಗನಹಳ್ಳಿ** | | |
| 7 | ಗ್ರಾಹಕರು ಅಕ್ರಮ-ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು ಐಪಿ ಸ್ಥಾವರಕ್ಕೆ ಮೂಲಭೂತ ಸೌಕರ್ಯ ಒದಗಿಸಿಕೊಡಬೇಕೆಂದು ಕೋರಿದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರಿಗೆ ತಿಳಿಸಿ ಆದ್ಯತಾನುಸಾರ ಸದರಿ ಅಂದಾಜು ಪಟ್ಟಿಗೆ ಕಾರ್ಯಾದೇಶ/ಅನುಮೋದನೆ ನೀಡಿ ಜರೂರಾಗಿ ಮೂಲಭೂತ ಸೌಕರ್ಯ ಒದಗಿಸಿಕೊಡಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| **ಗ್ರಾಹಕರು- ಶ್ರೀ ಬಿ.ಸಿ.ರವಿ, ಬಿದರಕೋಟೆ 9071256110** | | |
| 8 | ಗ್ರಾಹಕರು ಅಕ್ರಮ-ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು ಐಪಿ ಸ್ಥಾವರಕ್ಕೆ ಮೂಲಭೂತ ಸೌಕರ್ಯ ಒದಗಿಸಿಕೊಡಬೇಕೆಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಈಗಾಗಲೇ 2016ರ ಸಾಲಿನ ವರೆವಿಗೂ ಕಾರ್ಯಾದೇಶ ನೀಡಲಾಗುತ್ತಿದ್ದು, ಜೇಷ್ಠತಾ ಪಟ್ಟಿಯನುಸಾರ ಮುಂದಿನ ದಿನಗಳಲ್ಲಿ ಪ್ರತಿಯೊಬ್ಬ ಗ್ರಾಹಕರಿಗೂ ಮೂಲಭೂತ ಸೌಕರ್ಯ ಒದಗಿಸಿಕೊಡಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |
| **ಗ್ರಾಹಕರು- ಕೆ.ಬೆಳ್ಳೂರು ಹಾಗೂ ಅರುವನಹಳ್ಳಿ** | | |
| 9 | ಸದರಿ ಗ್ರಾಮದ ಗ್ರಾಹಕರು ನಮ್ಮ ಐಪಿ ಸೆಟ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಸಮಸ್ಯೆ ಬಗೆಹರಿಸುವ ಸಲುವಾಗಿ ಈ ಹಿಂದೆ ಲಿಂಕ್ ಲೈನ್ ಅಂದಾಜು ಪಟ್ಟಿ ಸಲ್ಲಿಸಲಾಗಿದ್ದು, ಕಾಮಗಾರಿ ಪೂರ್ಣಗೊಂಡಿಲ್ಲವೆಂದು ತಿಳಿಸಿದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಸದರಿ ಅಂದಾಜು ಪಟ್ಟಿಗೆ ಅನುಮೋದನೆ ನೀಡಲಾಗಿದ್ದು, ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |
| **ಗ್ರಾಹಕರು- ಶ್ರೀ ರಮೇಶ ತೈಲೂರು - 9880055943** | | |
| 10 | ಐಪಿ ಸೆಟ್‌ನ ಪರಿವರ್ತಕ ವಿಫಲಗೊಂಡು 20ದಿನವೇ ಕಳೆದಿದೆ. ಬೆಳೆಗಳಿಗೆ ನೀರಿಲ್ಲದೇ ಒಣಗುತ್ತಿವೆ. ದಯಮಾಡಿ ಪರಿವರ್ತಕ ಅಳವಡಿಸಿಕೊಡಿ ಎಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮದ್ದೂರು ರವರು ವಿಭಾಗೀಯ ಉಗ್ರಾಣ ಪಾಲಕರಿಗೆ ತಿಳಿಸಿ ಜರೂರಾಗಿ ಪರಿವರ್ತಕ ಕೊಡಲು ತಿಳಿಸಿದರು. |
| **ಗ್ರಾಹಕರು- ಶ್ರೀ ರಮೇಶ ತೊಪ್ಪನಹಳ್ಳಿ - 6362505553** | | |
| 11 | ಅಕ್ರಮ-ಸಕ್ರಮ ಯೋಜನೆಯಡಿ ಕಾಮಗಾರಿಗೆ ಕಾರ್ಯಾದೇಶ ದೊರಕಿದೆ. ಪಕ್ಕದ ಜಮೀನಿನ ಗ್ರಾಹಕರು ಕೆಲಸ ನಿರ್ವಹಿಸಲು ಬಿಡುತ್ತಿಲ್ಲವೆಂದು ತಿಳಿಸಿದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಸಂಬಂಧಪಟ್ಟ ಶಾಖಾಧಿಕಾರಿ ಶ್ರೀ ತೇಜ್‌ಪ್ರಕಾಶ್‌ರವರಿಗೆ ತಿಳಿಸಿ ಹೇಳುತ್ತಾ ನಿಮ್ಮ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಜೊತೆಗೂಡಿ ಪೋಲೀಸ್ ಠಾಣೆಗೆ ದೂರು ದಾಖಲಿಸಿ ಜರೂರಾಗಿ ಕೆಲಸ ನಿರ್ವಹಿಸುವಂತೆ ಸೂಚಿಸಿದರು. |

| | | |
|---|---|---|
| **ಗ್ರಾಹಕರು- ಶ್ರೀ ರೂಮನ್‌ಪಾಷ, ಕೆಸ್ತೂರು 8453617127** | | |
| 12 | ನಮ್ಮ ಐಪಿಸೆಟ್ ಬಳಿ ಎಲ್‌ಟಿ ವೈರ್ ಕಳುವಾಗಿ ಸುಮಾರು ತಿಂಗಳುಗಳೇ ಕಳೆದಿದೆ. ಇದರಿಂದಾಗಿ ನಮ್ಮ ಐಪಿಸೆಟ್‌ಗೆ ವಿದ್ಯುತ್ ಸಂಪರ್ಕವಿಲ್ಲ. ದಯಮಾಡಿ ವೈರ್ ಹಾಕಿಸಿಕೊಡಿ ಎಂದು ಕೇಳಿದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಸಹಾಯಕ ಇಂಜಿನಿಯರ್(ತಾಂತ್ರಿಕ), ಮದ್ದೂರು-2 ರವರನ್ನು ಕೇಳಲಾಗಿ ಅಂದಾಜು ಪಟ್ಟಿ ಸಲ್ಲಿಸಿದ್ದು ಕಾರ್ಯಾದೇಶ ದೊರಕಿದೆ ಎಂದು ತಿಳಿಸಿದರು. ನಂತರ ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು 15 ದಿನದಲ್ಲೇ ಕೆಲಸ ಪೂರ್ಣಗೊಳಿಸುವಂತೆ ಸಹಾಯಕ ಇಂಜಿನಿಯರ್(ತಾಂತ್ರಿಕ) ರವರಿಗೆ ಸೂಚಿಸಿದರು. |
| **ಗ್ರಾಹಕರು- ಶ್ರೀ ಶಿವಕುಮಾರ್, ಹರಕನಹಳ್ಳಿ 8050343945** | | |
| 13 | ಗ್ರಾಹಕರು ಅಕ್ರಮ-ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು ಐಪಿ ಸ್ಥಾವರಕ್ಕೆ ಮೂಲಭೂತ ಸೌಕರ್ಯ ಒದಗಿಸಿಕೊಡಬೇಕೆಂದು ಕೋರಿದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಜೇಷ್ಠತಾ ಪಟ್ಟಿಯನುಸಾರ ಮುಂದಿನ ದಿನಗಳಲ್ಲಿ ಕಾರ್ಯಾದೇಶ ಕೊಡುವುದಾಗಿ ತಿಳಿಸಿದರು. |
| **ಗ್ರಾಹಕರು- ಶ್ರೀ ಅಪ್ಪಾಜಿ, ಹುನುಗನಹಳ್ಳಿ 9844188921** | | |
| 14 | ಎಸ್‌ಸಿಪಿ ಯೋಜನೆಯಡಿ 11 ಕೆವಿ ಲೈನ್ ಕಾಮಗಾರಿ ಪೂರ್ಣಗೊಂಡಿದೆ. ಇದುವರೆವಿಗೂ ಪರಿವರ್ತಕವನ್ನೇ ಕೊಟ್ಟಿಲ್ಲವೆಂದು ತಿಳಿಸಿದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಶಾಖಾಧಿಕಾರಿ ಸಂತೋಷ್‌ರವರಿಗೆ ತಿಳಿಸಿ ಪರಿವರ್ತಕ ಡ್ರಾ ಮಾಡಿ 2 ದಿನದಲ್ಲಿ ಕೆಲಸ ಮುಗಿಸುವಂತೆ ಆದೇಶಿಸಿದರು. |
| **ಗ್ರಾಹಕರು- ಶ್ರೀ ಸಿದ್ದರಾಮಯ್ಯ, ನಿಲುವಾಗಿಲು 8746907977** | | |
| 15 | ಸದರಿ ಗ್ರಾಹಕರು ತಮ್ಮ ಮನೆಗೆ ವಿದ್ಯುತ್ ಕಂಬ ಅಳವಡಿಸಿ ಸರ್ವಿಸ್ ಕೊಡಲು ಕೋರಿದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಶಾಖಾಧಿಕಾರಿ ಸಂತೋಷ್‌ರವರಿಗೆ ತಿಳಿಸಿ ಡಿಡಿಯುಜಿಜೆವೈ ಯೋಜನೆಯಡಿ ಗ್ರಾಹಕರಿಗೆ ವಿದ್ಯುತ್ ಕಂಬ ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲು ಸೂಚಿಸಿದರು. |
| **ಗ್ರಾಹಕರು- ಶ್ರೀ ಸುರೇಶ್, ಮಲ್ಲನಾಯಕನಹಳ್ಳಿ 9483488615** | | |
| 16 | ನಮ್ಮ ಗ್ರಾಮದ ಮಾರಮ್ಮ ದೇವಸ್ಥಾನದ ಬಳಿ ಸುಮಾರು ವರ್ಷದಿಂದಲೂ ತುಂಬಾ ಹಳೆಯದಾದ 11ಕೆವಿ ಲೈನ್ ಇದ್ದು ಪದೇ ಪದೇ ತುಂಡಾಗಿ ಬೀಳುತ್ತದೆ. ದಯಮಾಡಿ ವಿದ್ಯುತ್ ಲೈನ್ ಬದಲಾಯಿಸಿ, ದೇವಸ್ಥಾನದ ಪಕ್ಕಕ್ಕೆ ಸ್ಥಳಾಂತರಿಸಿಕೊಡಿ ಎಂದು ಕೋರಿದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಶಾಖಾಧಿಕಾರಿ ಸಂತೋಷ್‌ರವರಿಗೆ ತಿಳಿಸಿ ಜನವರಿ-2019ರ ಆರ್ & ಎಂ ಅನುದಾನದಲ್ಲಿ (ಯೋಜನೆ) ಸದರಿ ಕಾಮಗಾರಿಗೆ ಅಂದಾಜು ಪಟ್ಟಿ ತಯಾರಿಸಿ, ನಿಮ್ಮ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರಿಗೆ ತಿಳಿಸಿ ಕಾರ್ಯಾದೇಶ ತೆಗೆದುಕೊಂಡು ಬರುವ ಪೆಬ್ರವರಿ-2019ರ ಒಳಗೆ ಕೆಲಸ ಮುಗಿಸುವಂತೆ ಆದೇಶಿಸಿದರು. |
| **ಗ್ರಾಹಕರು- ಶ್ರೀ ರಾಮಣ್ಣ, ಈರೇಗೌಡನದೊಡ್ಡಿ** | | |
| 17 | ನಮ್ಮ ಗ್ರಾಮದ ಸರ್ಕಾರೀ ಶಾಲಾ ಆವರಣದ ಮೇಲೆ ವಿದ್ಯುತ್ ಲೈನ್ ಹಾದು ಹೋಗಿದ್ದು ಶಾಲಾ ಮಕ್ಕಳಿಗೆ ತೊಂದರೆಯಾಗದಂತೆ ಸ್ಥಳಾಂತರಿಸಿಕೊಡಬೇಕೆಂದು ಕೋರಿದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಶಾಖಾಧಿಕಾರಿ ಸಂತೋಷ್‌ರವರಿಗೆ ತಿಳಿಸಿ ನಿಗಮದ ನಿಯಮಾನುಸಾರ ಅಂದಾಜು ಪಟ್ಟಿ ತಯಾರಿಸಿ ಕೂಡಲೇ ವಿದ್ಯುತ್ ಲೈನ್‌ನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |

ಈ ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿ, ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಪರಿವರ್ತಕ ವಿಫಲಗೊಳ್ಳದಂತೆ ಜಾಗ್ರತೆ ವಹಿಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ. ಪರಿವರ್ತಕ ವಿಫಲಗೊಂಡಾಗ ಗ್ರಾಹಕರಿಗೆ ಯಾವುದೇ ತರಹದ ಜವಾಬ್ದಾರಿ ನೀಡದೆ ಅಂದರೆ ಗ್ರಾಹಕರನ್ನು ಪರಿವರ್ತಕದ ವಿವರ ತರಲು ಹೇಳುವುದು, ಪರಿವರ್ತಕವನ್ನು ಉಗ್ರಾಣಕ್ಕೆ ತರಲು ತಿಳಿಸುವುದು, ಇಂತಹ ಯಾವುದೇ ರೀತಿಯ ಬೇಜವಾಬ್ದಾರಿ ಮಾತುಗಳನ್ನು ಹೇಳದೆ ಸುಟ್ಟ ಪರಿವರ್ತಕವನ್ನು ಜರೂರಾಗಿ ಬದಲಾಯಿಸುವಂತೆ ಎಲ್ಲಾ ಶಾಖಾಧಿಕಾರಿಗಳಿಗೆ ತಿಳಿಸಿದರು. ಸರ್ಕಾರಿ ಶಾಲೆ, ಆಸ್ಪತ್ರೆ ಹಾಗೂ ಇತರೇ ಯಾವುದೇ ತರಹದ ಸರ್ಕಾರಿ ಕಟ್ಟಡಗಳ ಮೇಲೆ ವಿದ್ಯುತ್ ತಂತಿ ಹಾದುಹೋಗಿದ್ದರೆ ಅದನ್ನು ತೆರವುಗೊಳಿಸಿ ಬೇರೆಡೆ ಸ್ಥಳಾಂತರಿಸುವುದು ನಿಗಮದ ಕರ್ತವ್ಯ ಅದನ್ನು ನಾವು-ನೀವುಗಳೇ ಜವಾಬ್ದಾರಿಯಿಂದ ನಿರ್ವಹಿಸಬೇಕೆಂದು ತಿಳಿಸಿದರು. ನಿಗಮದ ವತಿಯಿಂದ 24*7 ವಾಹನ ನೀಡಲಾಗಿದ್ದು ಅದರ ಸದುಪಯೋಗ ಪಡೆದುಕೊಳ್ಳುವಂತೆ ಸಭೆಯಲ್ಲಿದ್ದ ಗ್ರಾಹಕರಿಗೆ ತಿಳಿಸಿ ಹೇಳುತ್ತಾ ಮುಂದಿನ ಜನ ಸಂಪರ್ಕ ಸಭೆಯ ವೇಳೆಗೆ ನಿಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುವುದಾಗಿ ತಿಳಿಸಿ ಸಭೆಯನ್ನು ಸಾಯಂಕಾಲ 5.00 ಗಂಟೆಗೆ ಮುಕ್ತಾಯಗೊಳಿಸಲಾಯಿತು.

G. Mahesh

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್, ಗ್ರಾಮಾಂತರ ಉಪ ವಿಭಾಗ, ಮದ್ದೂರು

ಪ್ರತಿಯನ್ನು,

1) ಪ್ರಧಾನ ವ್ಯವಸ್ಥಾಪಕರು, ಚಾವಿಸನಿನಿ, ನಿಗಮ ಕಾರ್ಯಾಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ, ಮೈಸೂರು ವಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಮಂಡ್ಯರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮಂಡ್ಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
6) ಲೆಕ್ಕಾಧಿಕಾರಿ(ಆಂಪ), ಸೆಸ್ಕ್, ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
7) ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮದ್ದೂರು ಉಪವಿಭಾಗ-1 ರವರ ಮಾಹಿತಿಗಾಗಿ ಸಲ್ಲಿಸಿದೆ.
8) ಸಹಾಯಕ ಇಂಜಿನಿಯರ್(ತಾಂ), ಉಪವಿಭಾಗ-1, ಮದ್ದೂರು ರವರ ಮುಂದಿನ ಕ್ರಮಕ್ಕಾಗಿ,
9) ಸಹಾಯಕ ಇಂಜಿನಿಯರ್(ತಾಂ), ಗ್ರಾಮಾಂತರ ಉಪವಿಭಾಗ, ಮದ್ದೂರು ರವರ ಮುಂದಿನ ಕ್ರಮಕ್ಕಾಗಿ,
ಮು.ಕ